ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ, ೨೧ನೇ ಮಾರ್ಚ್, ೧೯೮೩/ಫಾಲ್ಗುಣ ೩೦, ೧೯೦೫

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತ್ತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು.

ವೇಗಗಾಮಿದಳವನ್ನು ರಚಿಸುವ ಬಗ್ಗೆ

೨೭ ಶ್ರೀ ಗೋವಿಂದ ಪಿ. ವಡೆಯರಾಜ್ (ಕಮಲಾಪುರ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಸರಕಾರವು ಫ್ಲೈಯಿಂಗ್ ಸ್ಕ್ವಾಡ್ (ತಾಂತ್ರಿಕ) ರಚಿಸಲು ತೀರ್ಮಾನಿಸಿದೆಯೇ,

(ಆ) ಹಾಗಿದ್ದಲ್ಲಿ ಈ ಫ್ಲೈಯಿಂಗ್ ಸ್ಕ್ವಾಡ್ ದಳದ ಕಾರ್ಯಸ್ವರೂಪ ಮತ್ತು ಕರ್ತವ್ಯವೇನು,

(ಇ) ಲೋಕೋಪಯೋಗಿ ಇಲಾಖೆಯ ಕೆಲಸಗಳಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸರಕಾರವು ಇನ್ನು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲು ಆಲೋಚಿಸಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು. ಜಾಗೃತ ಘಟಕ ಫ್ಲೈಯಿಂಗ್ ಸ್ಕ್ವಾಡ್ (ತಾಂತ್ರಿಕ) ಸರಕಾರದ ಆದೇಶದ ಸಂಖ್ಯೆ ಪಿಡಬ್ಲ್ಯೂಡಿ ೯೭ ಪಿಸಿಟಿ ೮೨, ದಿನಾಂಕ ೧೦ನೇ ಫೆಬ್ರುವರಿ ೧೯೮೩ ರಲ್ಲಿ ರಚಿಸಲಾಗಿದೆ.

(ಆ) ಸರ್ಕಾರಕ್ಕೆ ಬಂದ ದೂರುಗಳ ಮೇಲೆ ಮೊದಲ ತನಿಖೆ ನಡೆಸುವುದು ಮತ್ತು ಸತ್ಯಾಂಶವನ್ನು ಕಂಡುಹಿಡಿಯುವುದು.

(ಇ) ಅಧಿಕಾರ ವಿಕೇಂದ್ರೀಕರಣ ಮತ್ತು ಇಲಾಖೆಯನ್ನು ವಿಭಾಗಿಸುವಂತಹ ಕೆಲವು ವಿಚಾರಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಗೋವಿಂದ ಪಿ. ವಡೆಯರಾಜ್.—ಮೊದಲನೇ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಜಾಗೃತ ಘಟಕವು ೧೦ನೇ ಫೆಬ್ರುವರಿ ೧೯೮೩ ರಂದು ರಚಿಸಲ್ಪಟ್ಟಿದೆ ಎಂದು ಹೇಳಲಾಗಿದೆ. ಅದಕ್ಕೆ ಅನುಗುಣವಾಗಿ ತಾವು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರಿ ಆಜ್ಞೆಯಲ್ಲಿ ಆಳವಡಿಸಿರತಕ್ಕಂಥಾದ್ದು ಏನೆಂದರೆ ಸರ್ಕಾರದ ಗಮನಕ್ಕೆ ಸಾರ್ವಜನಿಕರಿಂದ ಬರುವ ಅನೇಕ ದೂರುಗಳಾದ ಕಾಮಗಾರಿಯನ್ನು ಪೂರ್ತಿಗೊಳಿಸುವಲ್ಲಿ ನಿಧಾನ ಅಕ್ರಮಗಳು ಮಿತಿಮೀರಿದ ಅಂದಾಜು ಮುಂತಾದವುಗಳ ಬಗ್ಗೆ ಮೇಲ್ಕೊಟಕ್ಕೆ ಒಗದೆಯೇ ಪರಿಶೀಲನೆ ಮಾಡುವುದಕ್ಕೆ ಈ ಜಾಗೃತ ಘಟಕ ಇರುತ್ತದೆ. ಇದು ನೇರವಾಗಿ ಲೋಕೋಪ

ಯೋಗಿ ಇಲಾಖೆಯ ಕಮೀಷನರ್‌ರ ಅಧೀನದಲ್ಲಿ ಕೆಲಸ ಮಾಡುತ್ತದೆ. ಇದನ್ನು ಏಕೆ ಜಾಗೃತ ಆಯೋಗದ ವ್ಯಾಪ್ತಿಗೆ ತರಬಾರದು ಎಂದು ನೀವು ಪ್ರಶ್ನೇ ಕೇಳಬಹುದು. ಜಾಗೃತ ಆಯೋಗಕ್ಕೆ ಇಂತಹವುಗಳನ್ನು ಎಲ್ಲಾ ಸಂದರ್ಭಗಳಲ್ಲೂ ಕಳಿಸಬೇಕಾದ ಅವಶ್ಯಕತೆ ಇಲ್ಲ. ದೂರುಗಳು ಯಾವ ಯಾವ ಕಾರಣಗಳಿಂದಾಗಿ ಬರುತ್ತವೆ? ಕೆಲವೊಂದು ಜವಾಬ್ದಾರಿಯಿಂದ ಬರಬಹುದು. ಅಥವಾ ಜವಾಬ್ದಾರಿರಹಿತವಾಗಿ ಬರಬಹುದಂ ಈ ದೂರುಗಳು ಬಂದ ತಕ್ಷಣ ನಮ್ಮ ಅಧಿಕಾರಿಗಳು ಹೋಗಿ ಪರಿಶೀಲನೆ ನಡೆಸತಕ್ಕಂಥ ಕಾಲದಲ್ಲಿ ಕೆಲವೊಂದು ಸಂದರ್ಭನಲ್ಲಿ ಸತ್ಯವನ್ನು ಮುಚ್ಚಿಡುವುದಕ್ಕೆ ಸಾಧ್ಯತ ಇದೆ. ಆದ್ದರಿಂದ ದೂರು ಬಂದ ಒಂದೆರಡು ದಿವಸಗಳಲ್ಲೇ ಅವುಗಳ ಪರಿಶೀಲನೆ ಮಾಡಿ ಮೇಲ್ನೋಟಕ್ಕೆ ಅಧಿಕಾರಿಗಳದ್ದು ತಪ್ಪಿದೆಯೆಂದು ತಿಳಿದು ಬಂದರೆ ಜಾಗೃತ ಆಯೋಗಕ್ಕೆ ರೆಫರ್ ಮಾಡಬಹುದು. ಅಥವಾ ಪ್ರೆಮಾ ಫೇಸಿ ಕೇಸ್ ಎಸ್ಟಾಬ್ಲಿಷ್ ಮಾಡಿ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬಹುದು. ಈ ಇಲಾಖೆಯೊಳಗೆ ವಿಫಿಶಿಯನ್ಸಿ ಹೆಚ್ಚು ಮಾಡುವುದಕ್ಕೋಸ್ಕರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಗೋವಿಂದ ಪಿ. ಪಡಿಯರಾಜ್.—ಸ್ವಾಮಿ, ಈ ಬಗ್ಗೆ ತಾವು ಒಂದು ಪತ್ರಿಕಾ ಹೇಳಿಕೆಯನ್ನೂ ಸಹ ಕೊಟ್ಟಿದ್ದೀರಿ. ಎಂದು ಹೇಳಿದ್ದೀರಿ. ಆದುದರಿಂದ ನಾನು ಕೇಳುವುದೇನೆಂದರೆ ಈ ಬಗ್ಗೆ ಒಂದು ಸರ್ಕಲ್ ಆಫೀಸು ಮತ್ತು ಒಂದು ಡಿವಿಷನಲ್ ಆಫೀಸರನ್ನು ಕ್ರಿಯೇಟ್ ಮಾಡಬೇಕು ಎಂದು ಏನು ಮಾಡಿದ್ದೀರಿ ಅದನ್ನು ಯಾವಾಗ ಮಾಡುತ್ತೀರಿ?

ಎರಡನೆಯದಾಗಿ ಈ ಲೋಕೋಪಯೋಗಿ ಇಲಾಖೆಯಲ್ಲಿ ಇರಿಗ್ಯುಲಾರಿಟೀಸ್ ಬಗ್ಗೆ ಬೇಕಾದಷ್ಟು ದೂರುಗಳು ಬರುತ್ತಾ ಇವೆ. ಇದನ್ನು ಸರಪ್ಪೈಸ್ ಚೆಕ್ ಮಾಡಿ ಇನ್ನೂ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಿಸಲಿಕ್ಕೆ ತಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ಸಾರ್ವತ್ರಿಕವಾಗಿ ನಾವು ಅಲ್ಲಿ ನಡೆಯಂತಕ್ಕಂಥ ಕೆಲಸಗಳೆಲ್ಲಾ ಈ ರೀತಿಯಾಗಿ ಇರೆಗ್ಯುಲರ್ ಆಗಿ ನಡೆಯುತ್ತಾ ಇವೆ ಅನ್ನುವ ಅಭಿಪ್ರಾಯಕ್ಕೆ ಬರುವಾರದು. ಎಲ್ಲಾ ಕಡೆ ಈ ಇಲಾಖೆಯಲ್ಲಿ ನಡೆಯತಕ್ಕಂಥ ಕೆಲಸಗಳೆಲ್ಲವೂ ಇದೇ ರೀತಿ ನಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಇಲಾಖೆಯಲ್ಲಿ ಪೇರಳವಾಗಿ ಹಣ ಖರ್ಚು ಮಾಡುವುದರಿಂದ ಕೆಲವು ಅಪವ್ಯಯವಾಗತಕ್ಕಂಥ ಕೆಲಸಗಳು ನಡೆಯಬಹುದು. ಅದಕ್ಕೆ ನಾವು ಈಗ ಏನು ಮಾಡಿದ್ದೇವೆ ಎಂದರೆ ಅಲ್ಲೇ ಒಂದು ಸರ್ಕಲ್ ಆಫೀಸ್ ಮತ್ತು ಒಂದು ಡಿವಿಷನಲ್ ಆಫೀಸ್ ಅನ್ನು ಕ್ರಿಯೇಟ್ ಮಾಡಿ ಒಬ್ಬ ಸೂಪರಿಂಟೆಂಡೆಂಟ್ ಇಂಜನೀಯರ್ ಕೈಕೆಳಗೆ ಒಬ್ಬ ಎಕ್ಸಿಕ್ಯೂಟೀವ್ ಇಂಜಿನೀಯರ್ ಮತ್ತು ಒಬ್ಬ ಟೈಪಿಸ್ಟ್ ಅನ್ನು ಕೊಟ್ಟಿರುತ್ತೇವೆ. ಅಲ್ಲದೆ ಅವರು ನೇರವಾಗಿ ವಿಧಾನಸೌಧದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯವರ ಕೈಕೆಳಗೆ ಕೆಲಸ ಮಾಡುತ್ತಾರೆ. ಆದರೆ ಇದಕ್ಕಾಗಿ ಒಂದು ಪ್ರತ್ಯೇಕ ಕಚೇರಿಯನ್ನು ಕ್ರಿಯೇಟ್ ಮಾಡುವುದಿಲ್ಲ. ಇನ್ನು ಮಾನ್ಯ ಸದಸ್ಯರು ಈ ಬಗ್ಗೆ, ಎಷ್ಟು ಸಾಧನೆಯಾಗಿದೆ ಎಂದು ಕೇಳಿದ್ದಾರೆ. ಆ ವಿಚಾರವಾಗಿ ಹೇಳಬೇಕಾದರೆ ತಾ ೧೯ ಮಾರ್ಚ್ ೧೯೮೬ರಲ್ಲಿ ಕೆಲವು ಅಧಿಕಾರಿಗಳನ್ನು ನಾವು ನೇಮಕ ಮಾಡಿದ್ದೇವೆ. ಅದರಲ್ಲಿ ಉಮೇಶ್‌ರಾವ್ ಎಂಬುವರನ್ನು ಬೆಳಗಾಂಗೆ ಪೋಸ್ಟ್ ಮಾಡಿದ್ದೇವೆ. ಕೆ. ಆರ್. ನಾಯಕ್ ಅವರನ್ನು ಸಹ ಪೋಸ್ಟ್ ಮಾಡಿದ್ದೇವೆ. ಅವರು ಇನ್ನೂ ಹೋಗಿ ಅಲ್ಲಿ ಛಾರ್ಜ್ ತೆಗೆದುಕೊಂಡಿಲ್ಲ. ಕಾರಣ ಅವರು ಬೆಂಗಳೂರು ಸಬ್‌ಡಿವಿಷನ್ ಸರ್ಕಲ್ ಆಫೀಸ್‌ನಲ್ಲಿ ಏನು ಕೆಲಸ ನಾಡುತ್ತಿದ್ದಾರೋ ಅಲ್ಲಿ ಬಹಳ ಕೆಲಸ ಚಾಸ್ತಿಯಾಗಿರುವುದರಿಂದ Year ending works ಚಾಸ್ತಿಯಾಗಿರುವುದರಿಂದ ಅವರು ಅಲ್ಲಿಗೆ ಇನ್ನೂ ಹೋಗಿಲ್ಲ. ಅವರು ಮುಂದಿನ ೧ನೇ ತಾರೀಖು ಅಲ್ಲಿಗೆ ಹೋಗಿ ಛಾರ್ಜ್ ತೆಗೆದುಕೊಳ್ಳಬಹುದು. ಆದ್ದರಿಂದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಆ ಕೆಲಸವನ್ನು ಪ್ರಾರಂಭ ಮಾಡುವ ಹಂತದಲ್ಲಿದ್ದೇವೆ. ಇದರ ಜೊತೆಗೆ ನಾವು ಸರ್‌ಪ್ರೈಸ್ ಚೆಕ್ ಮಾಡುವ ಹೊಸ ವಿಧಾನವನ್ನೂ ಕೂಡ ಮಾಡಿದ್ದೇವೆ. ಆ ಬಗ್ಗೆ ಒಂದು ಆದೇಶವನ್ನು ಈಗಾಗಲೇ ಹೊರಡಿಸಿದ್ದೇವೆ. ಅದರಲ್ಲಿ ಈ ರೀತಿ ಇದೆ. ಏನೆಂದರೆ ಪ್ರತಿಯೊಬ್ಬ ಎಕ್ಸಿಕ್ಯೂಟೀವ್ ಇಂಜಿನೀಯರ್ ತನ್ನ ಸರ್ಕಲ್‌ಗೆ ಸಂಬಂಧಪಟ್ಟ ಹಾಗೆ ಒಂದು ತಿಂಗಳಿಗೆ ೩೦ ವರ್ಕ್ಸ್ ಅನ್ನು ಸರಪ್ಪೈಸ್ ಚೆಕ್ ಮಾಡಬೇಕು ಅಂತ ಇದೆ. ಪ್ರತಿಯೊಬ್ಬ ಸೂಪರಿಂಟೆಂಡಿಂಗ್ ಇಂಜಿನೀಯರ್ ತನ್ನ ಸರ್ಕಲ್‌ಗೆ ಸಂಬಂಧಪಟ್ಟ ಹಾಗೆ ೨೦ ವರ್ಕ್ಸ್ ಅನ್ನು ಸರ್‌ಪ್ರೈಸ್ ಚಿಕ್ ಮಾಡಬೇಕು. ಹಾಗೆಯೇ ಪ್ರತಿಯೊಬ್ಬ ಚೀಫ್ ಇಂಜಿನೀಯರ್ ತಮ್ಮ ಜೋನ್‌ಗೆ ಸಂಬಂಧಪಟ್ಟ ಹಾಗೆ ೧೫ ವರ್ಕ್ಸ್ ಅನ್ನು ಸರಪ್ರೈಸ್ ಚೆಕ್ ಮಾಡಬೇಕು ಅಂತ ಇದೆ. ಅವರು ಚೆಕ್ ಮಾಡಿದ ಮೇಲೆ ಮುಂದಿನ ತಿಂಗಳು ೧೦ನೇ ತಾರೀಖು ಒಳಗೆ

ಆ ಬಗ್ಗೆ ಒಂದು ರಿಪೋರ್ಟ್ ಅನ್ನು ಅವರು ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅವರು ಅದರ ಒಂದು ಕಾಪಿಯನ್ನು ಪಿ.ಡಬ್ಲ್ಯು. ಡಿ. ಸೆಕ್ರೆಟರಿಗೂ ಮತ್ತೊಂದು ಕಾಪಿಯನ್ನು ನನಗೂ ಕಳುಹಿಸಿಕೊಡುತ್ತಾರೆ. ನಾವು ಈ ಒಂದು ಕ್ರಮವನ್ನು ಏತಕ್ಕೆ ಮಾಡಿದ್ದೇವೆ ಎಂದರೆ ಈ ಇಲಾಖೆಯಲ್ಲಿ ಸಾರ್ವತ್ರಿಕವಾಗಿ ಏನು ಒಂದು ತಪ್ಪು ಕಲ್ಪನೆ ಬಂದಿದೆ ಅದನ್ನು ಹೋಗಲಾಡಿಸಬೇಕೆನ್ನುವ ಉದ್ದೇಶದಿಂದ ಮಾಡಿದ್ದೇವೆ. ಇವರುಗಳು ಏನು ಸರ್‌ಪ್ರೈಸ್ ಚೆಕ್ ಮಾಡುತ್ತಾರೆ ಅದನ್ನು ಬೇಕಾದರೆ ಸ್ಕ್ವಾಡ್‌ನವರು ಮತ್ತೆ ಹೋಗಿ ಚೆಕ್ ಮಾಡಬಹುದು. ಆ ವಿಧಾನಗಳೂ ಸಹ ಇವೆ, ಅವರು ಹೋಗಿ ಬೇಕಾದರೆ ಕೌಂಟರ್ ಚೆಕ್ ಮಾಡಬಹುದು. ಈ ರೀತಿಯಾಗಿ ಈ ಇಲಾಖೆಯ ಮೇಲೆ ದೂರುಗಳಾಗಲಿ, ತಪ್ಪುಗಳಾಗಲಿ ಏನು ಇವೆ ಅದನ್ನು ಸರಿಪಡಿಸಲಿಕ್ಕೆ ಸರ್ವ ರೀತಿಯಲ್ಲಿ ನಾವು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಇದರ ಜೊತೆಗೆ ಪಿ. ಡಬ್ಲ್ಯು. ಡಿ. ಸೆಕ್ರೆಟರಿಯೂ ಸಹ ಹೋಗಿ ಮತ್ತೇ ರೀಚೆಕ್ ಮಾಡಬಹುದು. ಲೋಕೋಪಯೋಗಿ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಈ ರೀತಿಯಾಗಿ ಸರಪ್ರೈಸ್ ಚೆಕ್ ಮತ್ತು ರೀಚೆಕ್ ಮಾಡುವಂಥ ಕ್ರಮಗಳನ್ನು ಕೈಗೊಂಡಿದ್ದೇವೆ.

ಶ್ರೀ ಗೋವಿಂದ ಪಿ ಒಡೆಯರಾಜ್.—ತಾವು '(ಇ)' ಗೆ ಉತ್ತರವಾಗಿ ಅಧಿಕಾರ ವಿಕೇಂದ್ರೀಕರಣ ಮತ್ತು ಇಲಾಖೆಯನ್ನು ವಿಭಾಗಿಸುವಂತಹ ಕೆಲವು ವಿಚಾರಗಳು ಪರಿಶೀಲನೆಯಲ್ಲಿವೆ ಎಂದು ಹೇಳಿದ್ದೀರಿ ಯಾವ್ಯಾವ ವಿಭಾಗಗಳನ್ನಾಗಿ ವಿಂಗಡಿಸುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

ಎರಡನೆಯದಾಗಿ ಈ ಬರಗಾಲದಲ್ಲಿ ಬಹಳಷ್ಟು ಕಾಮಗಾರಿಗಳಾಗಿವೆ ಅಂತ ಹೇಳುತ್ತೀರಿ. ಆ ಬಗ್ಗೆ ಏನೇನು ಕೆಲಸಕಾರ್ಯಗಳು ನಡೆದಿವೆ ಅನ್ನುವುದು ನಮ್ಮ ಕಣ್ಣಿಗೆ ಕಾಣುತ್ತಾ ಇಲ್ಲ. ಇದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಆಗಿದ್ದರೂ ಸಹ ಅದರ ಫಲಿತಾಂಶ ನಮಗೆ ಕಾಣುತ್ತಾ ಇಲ್ಲ, ಈ ಬಗ್ಗೆ ಏನೇನು ಕೆಲಸಗಳು ನಡೆದಿವೆ ಅದರ ಪ್ರತಿಫಲ ಸಾಕಷ್ಟು ನಮಗೆ ದೊರಕುತ್ತಿದೆಯೇ ಇಲ್ಲವೇ ಅನ್ನುವುದಕ್ಕೆ ನಿಮ್ಮ ಜಾಗೃತ ಘಟಕಕ್ಕೆ ನೇಮಿಸಿ ಎಲ್ಲಿ ಸಾಕಷ್ಟು ಕೆಲಸ ಆಗಿಲ್ಲವೋ ಅಂಥಾ ಕಡೆ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ ಹಾಗೆ ಈ ಅಧಿಕಾರ ವಿಕೇಂದ್ರೀಕರಣ ಮತ್ತು ಇಲಾಖೆಯನ್ನು ವಿಭಾಗಿಸುವಂತಹ ಕೆಲವು ವಿಚಾರಗಳು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ಅಧಿಕಾರ ವಿಕೇಂದ್ರೀಕರಣವನ್ನು ಇದುವರೆಗೆ ಜಾರಿಗೆ ತರಲಿಲ್ಲ ಮುಂದೆ ಇದನ್ನು ಜಾರಿಗೆ ತರಬೇಕೂ ಎನ್ನುವ ಉದ್ದೇಶ ಇದೆ. ಆ ಬಗ್ಗೆ ಕಾರ್ಯಕ್ರಮಗಳನ್ನು ಸಹ ಹಾಕಿಕೊಂಡಿದೆ. ನಾವು ಆ ಬಗ್ಗೆ ಏನು ಮಾಡಬೇಕೆಂದು ಇದ್ದೇವೆ ಎಂದರೆ ಯಾವ್ಯಾವ ಅಧಿಕಾರಿಗಳು ಯಾವ್ಯಾವ ವಿಭಾಗದಲ್ಲಿ ಹೆಚ್ಚು ಪರಿಣಿತರಾಗಿದ್ದಾರೋ ಅಂಥಾವರನ್ನು ಅಲ್ಲಿಗೇನೇ ಪೋಸ್ಟ್ ಮಾಡಬೇಕೆಂದು ಇದ್ದೇವೆ. ಉದಾಹರಣೆ, ಒಬ್ಬರು ಪಿ ಹೆಚ್ ಇ ನಲ್ಲಿ ಎಕ್ಸ್‌ಪರ್ಟ್ ಇದ್ದರೆ ಅವರನ್ನು ಬೇರೆ ಇತರೆ ಕೆಲಸಗಳಿಗೆ ಅಂದರೆ ರೋಡ್ಸ್ ಬಿಲ್ಡಿಂಗ್ಸ್ ಡಿವಿಷನ್‌ಗೆ ಹಾಕಿದರೆ ಪ್ರಯೋಜನವಾಗುವುದಿಲ್ಲ. ಆದುದರಿಂದ ಅವರವರ ಒಂದು ಪರಿಣತಿ ಯಾವುದರಲ್ಲಿದೆ ಅಲ್ಲಿಗೆ ಅವರನ್ನು ಪೋಸ್ಟ್ ಮಾಡಿದರೆ ಅನುಕೂಲವಾಗುತ್ತದೆ. ಈ ಕೆಲಸವನ್ನು ನಾವು ಮುಂದಿನ ಜನರಲ್ ಟ್ರಾನ್ಸ್‌ಫರ್‌ನಲ್ಲಿ ಮಾಡಬೇಕು ಎಂದು ಮಾಡಿದ್ದೇವೆ. ಆವಾಗ ಇದು ಅನುಕೂಲವಾಗಬಹುದು. ಯಾವ್ಯಾವ ಕೆಲಸಗಳಲ್ಲಿ ಯಾವ್ಯಾವ ಪರಿಣತರು ಇದ್ದಾರೋ ಅವರನ್ನು ಸಂಬಂಧಪಟ್ಟ ಕೆಲಸಕ್ಕೆ ಪೋಸ್ಟ್ ಮಾಡಿದರೆ ಇದನ್ನು ಸ್ಕ್ರುಟಿನೈಸ್ ಮಾಡಬಹುದು, ಈ ಬಗ್ಗೆ ಟೀಮ್ ಆಫೀಸರ್ಸ್ ಇದ್ದು ಅವರು ಸ್ಕ್ರುಟಿನೈಸ್ ಮಾಡುತ್ತಾರೆ. ತಮಗೆ ಹೇಳಬೇಕಾದರೆ ಒಬ್ಬ ಸೂಪರಿಂಟೆಂಡಿಂಗ್‌ಗೆ ಇಂಜನೀಯರ್‌ಗೆ ಸಂಬಂಧಪಟ್ಟ ಹಾಗೆ ಅಸಿಸ್ಟೆಂಟ್ ಇಂಜನೀಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರುಗಳನ್ನು ಯಾರ್ಯಾರನ್ನು ಎಲ್ಲೆಲ್ಲಿಗೆ ಬೇಕೋ ಅಲ್ಲಿಗೆ ಟ್ರಾನ್ಸ್‌ಫರ್ ಮಾಡಬಹುದು, ಹಾಗೆಯೇ ಚೀಫ್ ಇಂಜನೀಯರ್ ಅಧ್ಯಕ್ಷತೆಯಲ್ಲಿ ೪ ಜನರ ಒಂದು ಸಮಿತಿ ಇದೆ. ಅವರು ಅಲ್ಲಿ ಎಕ್ಸ್‌ಪರ್ಟ್ಸ್ ಯಾರ್ಯಾರು ಇದ್ದಾರೆ ಅನ್ನುವುದನ್ನು ಪರಿಶೀಲನೆ ಮಾಡಿ ಯಾರ್ಯಾರನ್ನು ಎಲ್ಲೆಲ್ಲಿಗೆ ಟ್ರಾನ್ಸ್‌ಫರ್ ಮಾಡಬೇಕೋ ಅಲ್ಲಿಗೆ ಮಾಡುತ್ತಾರೆ. ಅವರವರ ಒಂದು ಯುಟಿಲಿಟಿ ಮತ್ತು ಎಕ್ಸ್‌ಪರ್ಟೈಸೇಷನ್ ಅನ್ನು ಗಣನೆಗೆ ತೆಗೆದುಕೊಂಡು ಟ್ರಾನ್ಸ್‌ಫರ್ ಮಾಡುತ್ತಾರೆ. ಇದನ್ನು ಮುಂದಿನ ಜನವರಿಯಿಂದ ಕಾರ್ಯಗತ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳುತ್ತೇನೆ. ಈ ರೀತಿ ಮಾಡಿದರೆ ಈ ಇಲಾಖೆಯಲ್ಲಿ ದಕ್ಷತೆಯೂ ಕೂಡ ಹೆಚ್ಚುತ್ತದೆ ಎಂದೂ ನನಗೆ ಅನಿಸುತ್ತದೆ.

ಇನ್ನು ಇದರಲ್ಲಿ ಡಿಸೈನ್ ಸೆಕ್ಷನ್ ಅನ್ನು ಗೇರ್ ಅಪ್ ಮಾಡಬೇಕು ಎಂದು ಮಾಡಿದ್ದೇವೆ. ಅದನ್ನ ಸ್ವಲ್ಪ ಬಲಪಡಿಸ ಬೇಕಾಗುತ್ತದೆ. ಇವರಲ್ಲಿ ಅನುಭವುಳ್ಳವರಾದಂಥವರನ್ನು ಆ ಜಾಗದಲ್ಲಿ ಹಾಕಿದರೆ ಏನೂ ಪ್ರಯೋಜನ ಇಲ್ಲ. ಸರಿಯಾದ ಡಿಸೈನ್ ಇಲ್ಲದೇ ಹೋದರೆ ಕನ್‌ಸ್ಟ್ರಕ್ಷನ್ ಕೂಡ ಚೆನ್ನಾಗಿ ಆಗುವುದಿಲ್ಲ ಅದಕ್ಕೋಸ್ಕರ ಈ ಡಿಸೈನ್ ಸೆಕ್ಷನ್ ನಲ್ಲಿ ಯಾರು ಪರಿಣಿತರು ಇದ್ದಾರೋ ಅವರನ್ನು ಅಲ್ಲಿಗೆ ಹಾಕಬೇಕು ಅನ್ನುವ ಉದ್ದೇಶ ಇದೆ. ಹಾಗೆಯೇ ಇನ್‌ವೆಸ್ಟಿಗೇಷನ್ ಕೆಲಸಕ್ಕೂ ಕೂಡ ಅದರಲ್ಲಿ ಸರಿಯಾದ ಪರಿಣತಿ ಇರತಕ್ಕಂಥವರನ್ನು ಹಾಕಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈ ಎರಡು ಸೆಕ್ಷನ್ಸ್‌ಗೂ ಪೂರ್ತಿಕರವಾದವರನ್ನು ಹಾಕಿದರೆ ಕೆಲಸ ಚೆನ್ನಾಗಿ ನಡೆಯುತ್ತದೆ ಈ ವಿಷಯದಲ್ಲಿ ಸರ್ಕಾರ ಯೋಚನೆ ಮಾಡುತ್ತಿದೆ. ಆದರೆ ಎಲ್ಲರೂ ಎಕ್ಸಿಕ್ಯೂಟೀವ್ ಸೈಡ್‌ಗೆ ಹೋಗಲು ಇಷ್ಟಪಡುತ್ತಾರೇ ವಿನಾ ಈ ಡಿಸೈನ್ ಸೆಕ್ಷನ್‌ಗೆ ಇನ್‌ವೆಸ್ಟಿಗೇಷನ್ ಸೆಕ್ಷನ್‌ಗೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಕಾರಣಗಳು ಏನು ಏನ್ನುವುದು ನಮಗೆ ಗೊತ್ತಿದೆ. ನಾನು ಬೇರೆ ಹೇಳಬೇಕಾಗಿಲ್ಲ ಅದಕ್ಕೆ ನಾವೇನು ಮಾಡಬೇಕೆಂದು ಇದ್ದೇವೆ ಎಂದರೆ ಅವರಿಗೆ ೨೦ ಪರ್ಸೆಂಟ್ ಪೇಟೇಜ್ ಏಂತಲೋ ಏನಾದರೂ ಒಂದು ಸಂಬಳತ್ತ ಕೊಟ್ಟು ಆ ಸೆಕ್ಷನ್ಸ್‌ಗೆ ಹಾಕಬೇಕು ಅಂತ ಮಾಡಿದ್ದೇವೆ, ಈ ಡಿಸೈನ್ ಮತ್ತು ಇನ್‌ವೆಸ್ಟಿಗೇಷನ್ ಸೆಕ್ಷನ್ಸ್ ಏನು ಇದೆ. ಇದನ್ನು ತೀವ್ರ ರೀತಿಯಲ್ಲಿ ಯೋಚಿಸಿ ಇದರ ಬಗ್ಗೆ ತಕ್ಕ ಕ್ರಮಗಳನ್ನು ಕೈಕೊಳ್ಳುತ್ತೇವೆ. ಇವರೆಡೂ ಕೂಡ ಬಹಳ ಪ್ರಮುಖವಾದುದು.

ಇದೇ ರೀತಿಯಲ್ಲಿ ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಏನಿದೆ ಇದನ್ನೂ ಸಪ ಗೇರ್‌ಅಪ್ ಮಾಡಬೇಕು. ಇದಕ್ಕೆ ಒಬ್ಬ ಚೀಫ್ ಇಂಜನೀಯರ್ ಅನ್ನು ನೇಮಕ ಮಾಡಿ ಆ ರೋಡ್‌ನಲ್ಲಿ ರತಕ್ಕಂಥಾ ಎಲ್ಲಾ ಮೆಹಿಕಲ್ಸ್‌ನ್ನೂ ಆ ಒಬ್ಬ ಅಧಿಕಾರಿಯು ಹತೋಟಿಯಲ್ಲಿದಲು ಬಹಳ ಅವಶ್ಯಕತೆ ಇದೆ. ಎಲ್ಲಾ ಮೆಹಿಕಲ್ಸ್ ಮೂವ್‌ಮೆಂಟ್ ಅವನ ಹತೋಟಿಯಲ್ಲಿರಬೇಕು. ಏಕಕ್ಕೆಂದರೆ ನಾವೇನು ಈ ಮೆಹಿಕಲ್ಸ್‌ಗೆ ಬಂಡವಾಳ ಹೂಡಿದ್ದೇವೆ, ಅದು ಸರಿಯಾಗಿ ನಮಗೆ ಪರ್ಕ್ ಆಗುತ್ತದೆಯೋ ಇಲ್ಲವೇ ಅನ್ನುವುದನ್ನು ನೋಡಬೇಕು. ಅದನ್ನು No Profit no loss basisನಲ್ಲಿ ಪರ್ಕ್‌ಬೆಟ್ ಮಾಡುವಂತೆ ಮಾಡುಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕಾವೇರಿಗಾರಿ ಇಲಾಖೆ, ನೀರಾವರಿ ಇಲಾಖೆ ಮತ್ತು ಇಂಜನಿಯರಿಂಗ್ ಇಲಾಖೆಯನ್ನು ಮೂರು ವಿಭಾಗಗಳನ್ನಾಗಿ ಮಾಡಿ ಇಲಾಖೆಯನ್ನೇ ರೀ ಆರ್ಗನೈಸ್ ಮಾಡಬೇಕು ಎಂದು ನಾವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕರಾರುವಾಕ್ಕಾದಂಥ ತಪ್ಪುಗಳು ಸ್ಪ್ರಕ್ಚರ್ ಅಥವಾ ಡಿಸೈನ್‌ಗಳಲ್ಲಿ ಆಗಿದ್ದರೆ ಅದನ್ನು ನಮ್ಮಸ್ಯಾಡ್‌ನವರು ಕಂಡು ಬಿಡಿಯುತ್ತಾರೆ. ಇದರ ಬಗ್ಗೆ ನಮಗೆ ಯಾರೂ ದೂರುಗಳನ್ನು ಕೊಡಬೇಕಾಗಿಲ್ಲ. ನಮಗೆ ಅನುಮಾನ ಬಂದರೆ ಸಪ್ಲೈಮೈಸ್‌ಟೇಕ್ ಮಾಡಬೇಕು ಏನ್ನುವ ಉದ್ದೇಶದಿಂದಲೇ ಇದನ್ನು ಮಾಡಿದ್ದೇವೆ. ಇನ್ನೊಂದು ಇದನ್ನು ಮಾಡತಕ್ಕ ಮುಖ್ಯ ಉದ್ದೇಶವೆಂದರೆ ಸಾರ್ವಜನಿಕರ ಹಣವನ್ನು ಇಲ್ಲಿ ನಾವು ಏನು ತೊಡಗಿಸುತ್ತಿದ್ದೇವೆ ಅದು ಸರಿಯಾಗಿ ಉಪಯೋಗವಾಗಬೇಕೆನ್ನುವುದು ಮತ್ತು ನಮಗೆ ಯೋಗ್ಯ ರೀತಿಯಲ್ಲಿ ಕೆಲಸಗಳು ಆಗಬೇಕೆನ್ನುವುದೇ ಇಂಥ ಕೆಲವು ಕಾರ್ಯಕ್ರಮಗಳನ್ನು ನಾವು ಇದರ ಮೂಲಕ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ ಚಿನ್ನಸಕಟ್ಟಿ.—ಮಾನ್ಯ ಮಂತ್ರಿಗಳ ಇಲಾಖೆಯ ಬಗ್ಗೆ ಸುಧಾರಣೆಗಳನ್ನು ಮಾಡುವುದು ಸ್ವಾಗತಾರ್ಹವಾದುದು, ಈಗ ತಾವೇನು ಸ್ಕ್ಯಾಡ್ ಮಾಡಿದ್ದೀರಿ ಅದಕ್ಕೇನು ಪವರ್ಸ್ ಕೊಟ್ಟಿದ್ದೀರಿ ? ಎರಡನೆಯದಾಗಿ, ಇಲಾಖೆಯನ್ನು ರೈಫರ್ಕೇಷನ್ ಮಾಡುವ ಬಗ್ಗೆ ತಾವು ಹೇಳಿದ್ದೀರಿ. ಇದು ಬಹಳ ದೊಡ್ಡದಾದಂಥ ಇಲಾಖೆ. ಇವರ ವಿಂಗಡಣೆಗೆ ತಾವು ಒಪ್ಪಿ ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ತಾವು ಏರ್ಪಾಡು ಮಾಡುತ್ತೀರಿ ಎಂದು ತಿಳಿದಿದ್ದೇನೆ. ಮೂರನೆಯದಾಗಿ ಕಳೆದ ೮-೦೦ ವರ್ಷಗಳಿಂದ ಈ ಇಲಾಖೆಯಲ್ಲಿ ಪರ್ಚೇಸ್ ಮಾಡಿದ ವಿಷಯಗಳು ಐಡಲ್ ಆಗಿವೆ. ಕೋಟಿಗಟ್ಟಲೆ ಹಣ ಇವುಗಳ ಮೇಲೆ ಹಾಕಿದ್ದರೂ ಇವು ಕೆಲಸಕ್ಕೆ ಬಾರದ ಹಾಗೆ ಆಗಿವೆ, ಇವುಗಳ ಬಗ್ಗೆ ತಾವು ಏನಾದರೂ ವ್ಯವಸ್ಥೆ ಮಾಡಿ ಉಪಯೋಗ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಸ್ಕ್ವಾಡ್‌ನಲ್ಲಿರುವ ಅಧಿಕಾರಿಗಳು ನಾವು ಕೊಡತಕ್ಕ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗಿದೆಯೇ ಅಗತಕ್ಕ ಕೆಲಸ ಸರಿಯಾದ ಸ್ಟ್ಯಾಂಡರ್ಡ್‌ನಲ್ಲಿ ಆಗಿದೆಯೇ. ಸ್ಪೆಸಿಫಿಕೇಶನ್ ಪ್ರಕಾರ ಕೆಲಸ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವುದನ್ನು ತನಿಖೆ ಮಾಡಿ ನಮಗೆ ವರದಿ ಕೊಡುತ್ತಾರೆ. ಅವರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳತಕ್ಕದ್ದು ಸರ್ಕಾರಕ್ಕೆ ಸೇರಿದ್ದುದು. ಮಾನ್ಯ ಸದಸ್ಯರು ತಿಳಿಸಿದಂತೆ ಇದು ದೊಡ್ಡ ಇಲಾಖೆ. ಇದನ್ನು ಕಾಮಗಾರಿ ಇಲಾಖೆ, ನೀರಾವರಿ ಇಲಾಖೆ ಮತ್ತು ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಇಲಾಖೆಯಾಗಿ ಬೈಫರ್ಕೇಷನ್ ಮಾಡತಕ್ಕ ವಿಷಯ ಸರ್ಕಾರದ ಗಮನದಲ್ಲಿದೆ. ಮತ್ತು ನಮ್ಮಲ್ಲಿರತಕ್ಕ ಎಕ್ವಿಪಮೆಂಟ್ಸ್ ಬಗ್ಗೆಯೂ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇವು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲವೆನ್ನುವುದು ನಮ್ಮ ಗಮನಕ್ಕೆ ಬಂದು ಈ ಸಿ. ಎಂ. ಇ. ಗೆ ಒಬ್ಬ ಚೀಫ್ ಇಂಜನಿಯರನ್ನು ನೇಮಕ ಮಾಡಿ ಇದನ್ನು ಪುನರ್‌ಸಂಘಟನೆ ಮಾಡತಕ್ಕ ಬಗ್ಗೆ ಸರ್ಕಾರ ತನ್ನ ಎಲ್ಲಾ ಬುದ್ಧಿಯನ್ನು ಉಪಯೋಗ ಮಾಡುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಲೋಕೋಪಯೋಗಿ ಇಲಾಖೆಯನ್ನು ಪೃದ್ಧಿಗೊಳಿಸುವುದಕೆ ಇದರಲ್ಲಿ ಉತ್ತಮ ಸೇವೆ ಮಾಡಿದಂಥವರಿಗೆ ಅವಾರ್ಡ್ ಅಥವಾ ಪ್ರಶಸ್ತಿಯನ್ನು ಕೊಡುವ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರದವರು ಉದ್ದೇಶಿಸುವರೆ ? ಈ ಪದ್ಧತಿ ಬೇರೆ ಬೇರೆ ಇಲಾಖೆಗಳಲ್ಲಿ ಇದೆ. ಎರಡನೆಯದಾಗಿ, ಈ ಇಲಾಖೆಯ ಅಧಿಕಾರಿಗಳ ಕಾನ್‌ಫಿಡೆನ್ಸಿಯಲ್ ರಿಪೋರ್ಟನ್ನು ಕೆಲವೊಮ್ಮೆ ಅಧಿಕಾರಿಗಳು ಬರೆಯುವುದು ಎಂದು ನನಗೆ ತಿಳಿದುಬಂದಿದೆ. ನನ್ನ ಅಭಿಪ್ರಾಯದಲ್ಲಿ ಇದು ಸರಿಯಲ್ಲ. ಕಾಮಗಾರಿ ಇಲಾಖೆಯಲ್ಲಿ ಕೆಲಸ ಮಾಡಿದಂಥವರ ರಿಪೋರ್ಟನ್ನು ಆ ಇಲಾಖೆಯ ಮುಖ್ಯಸ್ಥರೇ ಬರೆಯಬೇಕು. ಈಗಿರುವ ವ್ಯವಸ್ಥೆಯನ್ನು ಕೊನೆ ಮಾಡಿ ಇಲಾಖೆಯ ಮುಖ್ಯಾಧಿಕಾರಿಗಳೇ ಕಾನ್‌ಫಿಡೆನ್ಸಿಯಲ್ ರಿಪೋರ್ಟನ್ನು ಬರೆಯುವಂತೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಚೀಫ್ ಇಂಜನಿಯರ್ಸ್, ಸೂಪರಿಂಟೆಂಡಿಂಗ್ ಇಂಜನಿಯರ್ಸ್ ಮತ್ತು ಎಕ್ಸಿಕ್ಯೂಟೀವ್ ಇಂಜನಿಯರ್‌ಗಳ ಒಂದು ಸಮ್ಮೇಳನವನ್ನು ಕರೆದು ಅವರೊಂದಿಗೆ ಕೆಲವು ವಿಷಯಗಳನ್ನು ಚರ್ಚೆಮಾಡಿದಾಗ ಅವರು ಈ ವಿಷಯದ ಬಗ್ಗೆ ಒಕ್ಕೊರಲಿನಿಂದ ಒಂದು ಅಭಿಪ್ರಾಯಕ್ಕೆ, ಬಂದು ತಮ್ಮ ಇಲಾಖೆಯ ಮುಖ್ಯಸ್ಥರೇ ತಮ್ಮ ರಿಪೋರ್ಟ್‌ನ್ನು ಬರೆಯುವಂಥ ವ್ಯವಸ್ಥೆ ಮಾಡಬೇಕು ಎನ್ನುವಂಥ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅವರ ಈ ಒಂದು ಏಕ ಮುಖವಾದಂಥ ಅಭಿಪ್ರಾಯವನ್ನು ಸರ್ಕಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅವಾರ್ಡ್‌ಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ ಈ ಇಲಾಖೆಯಲ್ಲಿ ಆ ಪದ್ಧತಿ ಇಲ್ಲ. ಇದರ ಬಗ್ಗೆ ಸರ್ಕಾರದ ನಿರ್ಣಯ ಮಾಡಿಲ್ಲ. ಇದನ್ನು ಪರಿಶೀಲನೆ ಮಾಡತಕ್ಕದ್ದು ಉತ್ತಮ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಕಾರಣ, ಅನೇಕ ಕಡೆ ನಾವು ೨೦೦-೩೦೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ. ದೇಶದಲ್ಲಿ ನಾವು ಎಲ್ಲರನ್ನೂ ಆಪ್ರಮಾಣಿಕರು ಎಂದು ಹೇಳುವುದಕ್ಕಾಗುವುದಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಅನೇಕ ಚೀಫ್ ಇಂಜನಿಯರುಗಳು ಊಟಕ್ಕೆ ಇಲ್ಲದಿರುವಂಥ ಸ್ಥಿತಿಯಲ್ಲಿರುವುದನ್ನು ನೋಡಿದ್ದೇನೆ. ಎಲ್ಲವನ್ನು ಒಂದೇ ದೃಷ್ಟಿಕೋನದಿಂದ ನೋಡುವುದು ಸರಿಯಲ್ಲ. ಆದ್ದರಿಂದ ಉತ್ತಮ ರೀತಿಯಲ್ಲಿ ಕೆಲಸ ಮಾಡಿದ್ದಂಥವರನ್ನು ಗುರುತಿಸಿ ಅವರಿಗೆ ಅವಾರ್ಡ್ ಕೊಡತಕ್ಕದ್ದು ಅವಶ್ಯಕ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸಚಿವರು ಹೇಳಿದರು ಈ ಇಲಾಖೆಯಲ್ಲಿ ಕೆಳಗಿನ ಅಧಿಕಾರಿಗಳು ಮಾಡಿದಂಥ ಕೆಲಸವನ್ನು ಮೇಲಿನ ಅಧಿಕಾರಿಗಳು ಸಪ್ರೈಸ್ ಆಗಿ ಭೇಟಿ ಕೊಟ್ಟು ಅದನ್ನು ತನಿಖೆ ಮಾಡಬೇಕು ಎಂದು. ಆದರೆ ಇಲ್ಲಿ ಸಾಮಾನ್ಯವಾದ ಪದ್ಧತಿ ಏನು ಇದೆಯೆಂದರೆ, ಒಬ್ಬ ಜೂನಿಯರ್ ಇಂಜನಿಯರ್ ಮಾಡಿದಂಥ ಕೆಲಸವನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ವರೆಗೂ ಒಪ್ಪತಕ್ಕದ್ದು ಪ್ರತೀತಿಯಾಗಿರುತ್ತದೆ, ಆದ್ದರಿಂದ ದಳದ ಅಧಿಕಾರಿಗಳು ಯಾವ ಸೂಚನೆಯನ್ನೂ ಕೊಡದೆ ಕೆಲಸ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ಕೊಟ್ಟು ತಪ್ಪುಗಳನ್ನು ಕಂಡು ಹಿಡಿಯಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದೆ ಸಂಬಂಧಪಟ್ಟವರಿಂದ ಸರ್ಕಾರಕ್ಕೆ ದೂರುಗಳು ಬರಲಿ, ಬರದೇ ಇರಲಿ ಎಕ್ಸಿಕ್ಯುಟೀವ್ ಇಂಜನಿಯರ್ಸ್ ೩೦ ಕೆಲಸಗಳನ್ನು ಸಪ್ರೈಸ್ ಚೆಕ್ ಮಾಡಬೇಕು, ಸೂಪರಿಂಟೆಂಡಿಂಗ್ ಇಂಜನಿಯರ್ಸ್ ೨೦ ಕೆಲಸಗಳನ್ನು, ಚೀಫ್ ಇಂಜನಿಯರ್ಸ್ ೧೫ ಕೆಲಸಗಳನ್ನು ಸಪ್ರೈಸ್ ಆಗಿ ಚೆಕ್ ಮಾಡಿ ನಮಗೆ ಪ್ರೋಗ್ರೆಸ್ ರಿಪೋರ್ಟನ್ನು ಕಳುಹಿಸಿಕೊಡಬೇಕು ಎಂದು. ಇದಲ್ಲದೆ ನಮ್ಮ ಸ್ಯಾಚ್ಯುರೇಷನ್‌ವರೂ ಸಹ ಚೆಕ್ ಮಾಡುತ್ತಿದ್ದಾರೆ. ಇದರ ಬಗ್ಗೆ ಏನೂ ಆತಂಕ ಇಲ್ಲ ಈ ಎಲ್ಲಾ ಅಧಿಕಾರಿಗಳಿಂದ ವರದಿ ಬಂದ ಮೇಲೂ ಸಹ ಆದನ್ನು ರೀ ಚೆಕ್ ಮಾಡ ಬಹುದು. ನಾವು ಇದರ ಬಗ್ಗೆ ಸಾಕಷ್ಟು ಮುಂಜಾಗ್ರತೆ ಕ್ರಮ ತೆಗೆದುಕೊಂಡು ಯಾವ ಯಾವ ಕೆಲಸಗಳಿಗೆ ಎಷ್ಟು ಹಣ ಕೊಟ್ಟಿದ್ದೇವೆ ಆದು ಸದುಪಯೋಗವಾಗಿದೆಯೇ ಎಂದು ನೋಡುತ್ತೇವೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರವೂ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮ್ಮ ಈ ದಳದಲ್ಲಿ ಖಾಸಗಿಯವರನ್ನು ನೇಮಕ ಮಾಡಿದರೆ ಒಳ್ಳೆಯದಲ್ಲವೇ. ನಮ್ಮ ರಾಜ್ಯದಲ್ಲಿ ಈ ವಿಷಯಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ಬುದ್ಧಿವಂತರು, ದೇಶಭಕ್ತರೂ ಇದ್ದಾರೆ. ಅಂಥವರನ್ನು ಈ ದಳದಲ್ಲಿ ನೇಮಕ ಮಾಡಿದರೆ ಒಳ್ಳೆಯದಲ್ಲವೇ ? ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾವು ಇದಕ್ಕಾಗಿ ಬೇರೆ ಡಿಟೆಕ್ಟಿವ್‌ಸ್‌ನ್ನು ಕರೆಯಿಸಬೇಕಾಗಿಲ್ಲ. ನಮ್ಮ ಇಲಾಖೆಯಲ್ಲಿ ಪ್ರಾಮಾಣಿಕರಾದ ಅಧಿಕಾರಿಗಳು ಇದ್ದಾರೆ. ನಾವು ನೇಮಿಸತಕ್ಕ ಅಧಿಕಾರಿಗಳ ಬಗ್ಗೆ ಅವರ ಪೂರ್ವಪರ ಎಲ್ಲಾ ಆಲೋಚನೆ ಮಾಡಿ ಸಾಕಷ್ಟುಯೋಗ್ಯ ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ. ಇದರ ಬಗ್ಗೆ ಯಾವ ಸಂಶಯಕ್ಕೂ ಎಡೆಗೊಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಇಲಾಖೆಯ ಬಗ್ಗೆ ಮಾನ್ಯ ರಾಜಗೋಪಾಲಾಚಾರಿಯವರು, ಇದು number one enemy ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿ ಖಾಸಗಿಯವರನ್ನು ನೇಮಕ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಡಿ. ದೇವೇಗೌಡ.—ದಿವಂಗತ ರಾಜಗೋಪಾಲಚಾರಿಯವರು ಆದನ್ನು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆಯೋ ಗೊತ್ತಿಲ್ಲ ಇದು ಸರ್ವವೇದ್ಯವಾದ ಮಾತು ಎಂದು ಹೇಳಿದ್ದಾರೆ. ಆದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. ನಮ್ಮದು ಖರ್ಚು ಮಾಡುವ ಇಲಾಖೆ. ಇದರಲ್ಲಿ ಏನೇ ದೋಷವಿದ್ದರೂ ಆದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಜೆ. ಎಚ್. ಪಟೇಲ್.—ಅದೇ ಕಾಲದಲ್ಲಿ ದಿವಂಗತ ರಾಜಗೋಪಾಲಚಾರಿಯವರು 'Communist party is my enemy No. 1' ಎಂದು ಹೇಳಿದ್ದಾರೆ. ಪಬ್ಲಿಕ್ ವರ್ಕ್ಸ್‌ಗೆ ಹೇಳುವಾಗ ಈ ಕಮ್ಯುನಿಸ್ಟ್ ಪಾರ್ಟಿಯ ಬಗ್ಗೆ ಕೂಡ ಆ ರೀತಿ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ನಮ್ಮನ್ನು ಏತಕ್ಕೆ ಎಳೆದು ತಂದಿರಿ ; ನಮ್ಮನೆ ತಲೆಯ ಮೇಲೆ ಕೆಸರು ಹಾಕಿಕೊಳ್ಳುವುದಕ್ಕೆ ನೀವು ಪ್ರಯತ್ನ ಪಡುತ್ತೀರಿ :

ಶ್ರೀ ಎಚ್. ಡಿ ದೇವೇಗೌಡ.—ಆದ್ದರಿಂದ ಇದೆಲ್ಲದರ ಉದ್ದೇಶದಿಂದ ಈ ಇಲಾಖೆಯಲ್ಲಿ ಅಧಿಕಾರಿ ವಿಕೇಂದ್ರೀಕರಣ ಮಾಡತಕ್ಕಂಥಾದ್ದರಲ್ಲಿ ಮತ್ತು ಪುನರ್ ವಿಂಗಡಣೆ ಮಾಡತಕ್ಕಂಥಾದ್ದರಲ್ಲಿ ನಾವೇನು ಪಣವನ್ನು ತೊಡಗಿಸಿದ್ದೇವೆಯೋ ಆ ಹಣ ಸರಿಯಾದ ರೀತಿಯಲ್ಲಿ ಉಪಯೋಗ ಆಗುವಂತೆ ಮಾಡಲು ನಾವು ಪ್ರಯತ್ನ ನಡಸಿದ್ದೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಮಾಗಡಿ ಜನರಲ್ ಆಸ್ಪತ್ರೆ ಕಟ್ಟಡದ ಬಗ್ಗೆ

೮೨ ಶ್ರೀ ಎಚ್. ಜಿ. ಚೆನ್ನಪ್ಪನವರು (ಮಾಗಡಿ)*.—

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಮಾಗಡಿಯ ಜನರಲ್ ಆಸ್ಪತ್ರೆಯ ಕಟ್ಟಡವು ಯಾವ ಮಟ್ಟಕ್ಕೆ ಬಂದಿದೆ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ.